

ಸಿಡ್ನಿ ಹಾರ್ಬರ್ ಬ್ರಿಡ್ಜ್ ಮೇಲೆ ಒಂದು ದಿನ ಸಂಚಾರವನ್ನು ಬಂದ್ ಮಾಡಲಾಯಿತು. ಕ್ರೇವ್ ಹಬ್ಬದ ನಿಮಿತ್ತ 10 ಸಾವಿರ ಮಂದಿ ಸೇತುವೆ ಮೇಲೆ ಉಪಾಹಾರ ಸವಿದು ಕುಣಿದು ಕುಪ್ಪಳಿಸಿದರು. ನಮ್ಮಲ್ಲೂ ರಸ್ತೆಗಳು ಬಂದ್ ಆಗುತ್ತವೆ. ಯಾರದ್ದೋ ಮನೆಯ ಗೃಹಪ್ರವೇಶಕ್ಕೆ..

ಮಾಲ್ಡೀವ್ಸ್‌ನಲ್ಲಿ ಸಾಗರದ ತಳಕ್ಕೆ ಸಚಿವ ಸಂಪುಟ ಸಭೆ ನಡೆಯಿತು. ಫ್ಲಾರಿಡಾ ಮರೈನ್ ಸ್ಯಾಂಕ್ಚುವರಿಯಲ್ಲಿ ನೀರಿನಡಿ ಹ್ಯಾಲೊವೀನ್ ಹಬ್ಬದ ನಿಮಿತ್ತ ಕುಂಬಳಕಾಯಿ ಕೆತ್ತನೆ ಸ್ಪರ್ಧೆ. ಚಾಕು- ಚೂರಿ ಹಿಡಿದ ವೀರರು ಬಳಿ ಸುಳಿದ ಮೀನನ್ನು ಕತ್ತರಿಸದೆ ಕುಂಬಳಕಾಯಿ ಕಡೆ ಗಮನ ಇಟ್ಟಿದ್ದಾರೆಂದರೆ ಬಹುಮಾನ ಭರ್ಜರಿಯೇ ಇರಬಹುದು.





ಅಮೆರಿಕದ ಶ್ವೇತಭವನದಲ್ಲಿ ಥ್ಯಾಂಕ್ಸ್ ಗಿವಿಂಗ್ ದಿನಕ್ಕಿಂತ ಮುನ್ನ ಕೋಳಿಯ ಕ್ಷಮೆ ಯಾಚನೆ ಹಬ್ಬ ನಡೆಯುತ್ತದೆ. ಬುಷ್ ಅಧ್ಯಕ್ಷರಾಗಿದ್ದಾಗ ಈ ಕೋಳಿ ಸಾಹೇಬರ ಬಳಿ ಕ್ಷಮೆ ಯಾಚಿಸಿ ಚಿಲ್ಲಿ ಚಿಕನ್ ಆಗುವುದರಿಂದ ಬಚಾವಾಯಿತು. ಕಣ್ಣಿಗೆ ಚಿಲ್ಲಿ ಬದಲು ಮಣ್ಣೆ ಎರಚುವುದನ್ನು ಕೋಳಿಯಿಂದ ಕಲಿಯಬಹುದು.

ಅಮೆರಿಕದಲ್ಲಿ ಆರ್ಥಿಕ ಹಿಂಜರಿತದಿಂದ ವಕೀಲರಿಗೂ ಹೊಡೆತ ಬಿದ್ದಿದೆ. ಸಹಜವೇ. ಆದರೆ ಜಾಸ್ತಿ ನಷ್ಟ ಆಗಿರುವುದು ವಿಚ್ಛೇದನ ಮಾಡಿಸುವ ವಕೀಲರಿಗಂತೆ. ವಿಚ್ಛೇದನ ಪ್ರಕರಣಗಳು ತೀರಾ ಕಡಿಮೆಯಾಗಿದ್ದು ಪರ್ಸ್ ಖಾಲಿ ಮಾಡುವುದಕ್ಕಿಂತ ಜಗಳ ಆಡುವುದೇ ಲೇಸು ಎಂಬ ತೀರ್ಮಾನಕ್ಕೆ ದಂಪತಿ ಬಂದಂತಿದೆ.



ಫ್ಲಾರಿಡಾದ ಜೋಯಲ್ ಕಳೆದ 6 ವರ್ಷಗಳಿಂದ ಹಗಲು- ರಾತ್ರಿ ಕೆಲಸ ಮಾಡಿದ. ರಾತ್ರಿ ಅಂಗಡಿಯಲ್ಲಿ ಬಟ್ಟೆ ಮಡಚುವ ಕೆಲಸ, ಹಗಲು ಮನೆಯಲ್ಲಿ ರಬ್ಬರ್ ಬ್ಯಾಂಡ್ ಸುತ್ತುವ ಕೆಲಸ. ಈ ರಬ್ಬರ್ ಬ್ಯಾಂಡ್ ಚೆಂಡೀಗ ಗಿನ್ನೆಸ್ ದಾಖಲೆ ಪುಸ್ತಕ ಸೇರಿದೆ. ಮುಂದೆ? ರಬ್ಬರ್ ಬ್ಯಾಂಡ್ ಬಿಚ್ಚುವ ಕೆಲಸ..!

ಕೆಟ್ಟದಾಗಿ ವಾಹನ ಚಲಾಯಿಸುವವರನ್ನು ಇನ್ನು ಮುಂದೆ ಬೈಯುವ ಹಾಗಿಲ್ಲ. ಕೆಟ್ಟ ಚಾಲನೆ ಅವರ ವಂಶವಾಹಿನಿಯಲ್ಲೇ ಇರುತ್ತದಂತೆ. ಇನ್ನು ಮುಂದೆ ಅಪಘಾತವಾದರೆ ಮದ್ಯದ ಪರೀಕ್ಷೆಗಿಂತ ಡಿಎನ್ಎ ಪರೀಕ್ಷೆ ಬರಬಹುದೇನೋ!

ಅಮೆರಿಕದ ಟ್ರೆವಿಸ್ ಸಿಡ್ನಿ ಹಾರ್ಬರ್ ಬ್ರಿಡ್ಜ್ ಎದುರು ನೆಲದಲ್ಲಿರುವ ಹೆಲಿಕಾಪ್ಟರ್ ಮೇಲೆ ಬೈಕ್‌ನಲ್ಲಿ ಜಂಪ್ ಹೊಡೆದ. ಮುಂದೇನಾಯ್ತಂತೆ? ಬೈಕ್ ನುಚ್ಚುನೂರಾಯ್ತಂತೆ. ಟ್ರೆವಿಸ್ ಹೆಲಿಕಾಪ್ಟರ್‌ನಿಂದ ಪ್ಯಾರಾಚೂಟ್ ಇಲ್ಲದೇ ಜಂಪ್ ಹೊಡೆಯಲು ಸಜ್ಜಾದ.

